# ಬಲಮುರಿ ಶಂಖ

■ ಡಾ. ನಾ. ಮೊಗಸಾಲೆ
ಕಲೆ: ಭಾವು ಪತ್ತಾರ್

ಸೀತಾಪುರದಲ್ಲಿ ಪ್ರತಿಷ್ಠಿತ ಪುರೋಹಿತರೆಂದು ಸ್ಥಾನಮಾನ ಪಡೆದಿರುವ ಶಂಭಟ್ಟರ ಅಂಗಳದ ಬದಿಯಲ್ಲಿ ಕಾರನ್ನಿಟ್ಟು ಪಂಚೆಯ ಕುಚ್ಚನ್ನು ಎಡಗೈಯಲ್ಲಿ ಹಿಡಿದು ಹೆಗಲಿನಲ್ಲಿದ್ದ ಉತ್ತರೀಯದ 'ನೆರಿ'ಯನ್ನು ಸರಿಪಡಿಸಿಕೊಂಡ ಶಾಂತಿಮೂಲೆ ಈಶ್ವರ ಭಟ್ಟರು 'ಪುರೋಹಿತರು ಮನೆಯಲ್ಲಿದ್ದರೆ ಪುಣ್ಯ!' ಎಂದುಕೊಳ್ಳುವಂತೆ ಶಂಭಟ್ಟರ ಚಾವಡಿಗೆ ಬಂದು ನಿಂತರು. ಅದೇ ಸುಮಾರಿಗೆ ಸಾತಂಗೋಳಿಯ ರಾಂಭಟ್ಟರಲ್ಲಿಗೆ ಪೌರೋಹಿತ್ಯಕ್ಕೆ ಹೋಗಲು ಸಿದ್ಧರಾಗುತ್ತಿದ್ದ ಶಂಭಟ್ಟರು 'ಇದು ಯಾರಪ್ಪ ವಕ್ರಿಸಿದ್ದು?' ಎಂದು ಒಳಕೋಣೆಯಿಂದ ಕುತೂಹಲದಲ್ಲಿ ಚಾವಡಿಗೆ ಇಣುಕಿದರು. ತಕ್ಷಣ ಈಶ್ವರ ಭಟ್ಟರು 'ನಮಸ್ಕಾರ' ಎಂದು ಎರಡೂ ಕೈ ಜೋಡಿಸಿದರು. 'ಇನ್ನು ಇವರನ್ನು ಮಾತನಾಡಿಸದೆ ಹೋಗುವುದು ಅಪರಾಧವಾಗುತ್ತದೆ' ಎಂದುಕೊಂಡ ಶಂಭಟ್ಟರು 'ಓ ಈಶ್ವರಣ್ಣನಾ? ಹೇಗಿದ್ದೀರಿ?' ಎಂದು ಚಾವಡಿಗೆ ಕಾಲಿಟ್ಟು ಪ್ರಶ್ನಿಸಿದ್ದಕ್ಕೆ 'ನೀವು ಅವಸರದಲ್ಲಿದ್ದೀರಿ ಎಂದು ಗೊತ್ತು!' ಎಂದು ನಕ್ಕು ಈಶ್ವರ ಭಟ್ಟರು 'ಐದು ನಿಮಿಷ ಬಿಡುವು ಮಾಡಿದರೆ ಸಾಕು!' ಎಂದು ವಿನಂತಿಸಿದರು.

ಶಂಭಟ್ಟರು ಕುರ್ಚಿಯಲ್ಲಿ ಕುಳಿತು 'ಹೇಳಿ?' ಎನ್ನುತ್ತಿದ್ದಂತೆ ಬಲದ ಜೇಬಿನಲ್ಲಿ ಭದ್ರವಾಗಿದ್ದ ವಸ್ತುವನ್ನು ನಿಧಾನ

